ಎಂ ವಿ ಸಿ. ನಂ. 299/2024 ಪಿಡಬ್ಲೂಃ 4

ದಿನಾಂಕಃ 29-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿಃ ಶ್ರೀ ಎಸ್ ಎಮ್ ಬಿ ವಕೀಲರಿಂದಃ**

2. ಅಪಘಾತದ ದಿನ ನಾನು ಓಡಿಸುತ್ತಿದ್ದ ಟಿಪ್ಪರ ವಾಹನಕ್ಕೆ ಯಾವ ಕಂಪನಿಯ ಇನ್ಸುರೆನ್ಸ ಇತ್ತು ನನಗೆ ಗೊತ್ತಿಲ್ಲ, ಸಾವಕಾರಗೆ ಗೊತ್ತು . ಖಾಲಿ ಗಾಡಿ ಇತ್ತು . ನಾನು ಸಂತೆಗುಳಿಯಿಂದ ಕುಮಟಾ ಕಡೆಗೆ ಬರುತ್ತಿದ್ದೆ. ಕುಮಟಾದಿಂದ ಬಾಡಿಗೆ ಇತ್ತು ಕಾರಣ ಕುಮಟಾಕ್ಕೆ ಬರುತ್ತಿದ್ದೆ . ಸಾವಕಾರರು ಕಮುಟಾಕ್ಕೆ ಹೋಗು ಎಂದು ಹೇಳಿದ್ದರು , ಕಾರಣ ಬರುತ್ತಿದ್ದೆ. ಸದರಿ ಟಿಪ್ಪರ ಲಾರಿಯಲ್ಲಿ ಕೆಂಪು ಕಲ್ಲು ಬಾಡಿಗೆ ಹೊಡೆಯುತ್ತಾರೆ. ಹೊನ್ನಾವರ ಚೆನ್ನಳ್ಳಿ ಮನೆ ಕಟ್ಟಲು ಕೆಂಪು ಕಲ್ಲು ಬಾಡಿಗೆ ಹೊಡೆಯುತ್ತಾರೆ . ಕೆಂಪು ಕಲ್ಲು ಬಾಡಿಗೆ ಹೊಡೆಯಲು ಪರ್ಮಿಟ್ ಇದೆ ಎಂದು ಹೇಳಿದ್ದಾರೆ , ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ.

3. ಕಾರು ನಮ್ಮ ಹಿಂದಿನಿಂದ ಬಂದಿತ್ತು . ಅಪಘಾತದ ಸಮಯದಲ್ಲಿ ನಮ್ಮ ವಾಹನ ಹಾಗೂ ಕಾರನ್ನು ಹೊರತು ಪಡಿಸಿ ಬೇರೆ ಯಾವುದೇ ವಾಹನ ಇರಲಿಲ್ಲ. ಕಾರು ನಮ್ಮ ವಾಹನದ ಹಿಂದುಗಡೆ ಡಿಕ್ಕಿ ಮಾಡಿಲ್ಲ, ಹಿಂದುಗಡೆಯಿಂದ ಬಂದು ಮುಂದಿನ ರೈಟ್ ಸೈಡ್ ಟಯರ್ ಗೆ ಟಚ್ ಆಗಿರುತ್ತದೆ. ಆ ದಿನ ನಮ್ಮ ಗಾಡಿಯಲ್ಲಿ ನಾವು ಇಬ್ಬರು ಇದ್ದೆವು . ನಾನು ಹಾಗೂ ಮಾದು ಎಂಬ ಇನ್ನೊಬ್ಬ ಹುಡುಗ ಇದ್ದೆವು. ಕಾರಲ್ಲಿ ಎಷ್ಟು ಜನರು ಇದ್ದರು ಗೊತ್ತಿಲ್ಲ ಆದರೆ ಮೂರು ಜನರು ಇರಬಹುದು . ಅಪಘಾತ ನಡೆದ ಸ್ಥಳ ಸಿದ್ದಾಪುರದಿಂದ ಕುಮಟಾ ರಸ್ತೆ ಯಾವ ದಿಕ್ಕಿಗೆ ಬರುತ್ತದೆ ನನಗೆ ದಿಕ್ಕು ಹೇಳಲು ಬರುವುದಿಲ್ಲ . ನಾನು ಮೂರು ವರ್ಷಗಳಿಂದ ವಾಹನ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಅಪಘಾತ ಸ್ಥಳದಿಂದ ನಮ್ಮ ವಾಹನ 10 ಫಿಟ್ ಮುಂದೆ ಹೋಗಿ ನಿಂತಿತು . ಟಿಪ್ಪರ ವಾಹನ ಎಂದರೆ ಭಾರಿ ವಾಹನ ಹಾಗೂ ಕಾರು ಲೈಟ್ ವಾಹನ ಎಂದರೆ ಸರಿ . ಯೂವುದೇ ಹೆವಿ ವಾಹನ 50 ರಿಂದ 60 ಕಿಲೋ ಮೀಟರ ವೇಗದಲ್ಲಿ ಇದ್ದರೆ ಅದನ್ನು ಕಂಟ್ರೋಲ್ ಮಾಡಲು 5 ಫಿಟ್ ಅಂತರದಲ್ಲಿ ನಿಲ್ಲಿಸಬಹುದ ಎಂದರೆ ಸರಿ . ಯಾವುದೇ ಹೆವಿ ವಾಹನ ಲೈಟ್ ವಾಹನಕ್ಕೆ ಡಿಕ್ಕಿ ಹೊಡೆದರೆ ಲೈಟ್ ವಾಹನಕ್ಕೆ ಜಾಸ್ತಿ ಪೆಟ್ಟಾಗುತ್ತದೆ ಹಾಗೂ ಹೆವಿ ವಾಹನಕ್ಕೆ ಕಡಿಮೆ ಪೆಟ್ಟಾಗುತ್ತದೆ ಎಂದರೆ ಸರಿ . ಸಿದ್ದಾಪುರದಿಂದ ಕುಮಟಾಕ್ಕೆ ಬರುವಾಗ ರಸ್ತೆಯ ಬಲಗಡೆ

ಅಪಘಾತವಾಗಿದೆ ಎಂದರೆ ಸರಿಯಲ್ಲ. ಟಿಪ್ಪರ ವಾಹನಕ್ಕೆ ಮುಂದುಗಡೆ ಆಗಿರುವ ಡ್ಯಾಮೇಜ್ ಕಾರು ಹೊಡೆದಿದ್ದಕ್ಕೆ ಆಗಿಲ್ಲ ಎಂದರೆ ಸಾಕ್ಷಿ ಕಾರು ನಮ್ಮ ಟಿಪ್ಪರ ಗೆ ಮುಂದಿನ ಟೈಯರ್ ಗೆ ಬಂದು ಹೊಡೆಯಿತು , ಆಗ ನಮ್ಮ ವಾಹನ ಲೆಪ್ಟಗೆ ಬಂದು ಚರಂಡಿಗೆ ಇಳಿಯಿತು , ಕಾರಣ ನಮ್ಮ ವಾಹನದ ಬೊನೆಟ್ ಗೆ ಡ್ಯಾಮೇಜ್ ಆಗಿರುತ್ತದೆ. ನಾನು ಟಿಪ್ಪರನ್ನು ಸಾವಕಾಶವಾಗಿ ಚಲಾಯಿಸಿಕೊಂಡು ಹೋಗುತ್ತಿದ್ದಲ್ಲಿ ಟಿಪ್ಪರ ವಾಹನ ಗಟಾರಕ್ಕೆ ಹೋಗಿ ಪಲ್ಟಿಯಾಗುವ ಸಾಧ್ಯತೆ ಇರಲಿಲ್ಲ ಎಂದರೆ ಸಾಕ್ಷಿ ಪಲ್ಟಿ ಆಗಿಲ್ಲ ಒಂದು ಬದಿ ವಾಲಿತ್ತು , ಕಾರು ಬಂದು ನಮ್ಮ ವಾಹನಕ್ಕೆ ಹೊಡದಿದ್ದರೆ ನಮ್ಮ ಗಾಡಿ ಸೈಡಿಗೆ ಹೋಗಿದೆ ಎಂದು ನುಡಿದಿರುತ್ತಾರೆ. ನಾನು ನನ್ನ ವಾಹನವನ್ನು ಅತೀವೇಗ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ಕಂಟ್ರೋಲ್ ಆಗದೇ ನಮ್ಮ ವಾಹನ ಲೋಪ ಆಗಿದೆ ಎಂದರೆ ಸರಿಯಲ್ಲ . ಅಪಘಾತ ನಮ್ಮ ಅತೀವೇಗ ಅಜಾಗರೂಕತೆಯಿಂದ ಆಗಿದೆ ಕಾರ ಚಾಲಕ ತನ್ನ ವಾಹನವನ್ನು ನಿಧಾನವಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದರು ಎಂದರೆ ಸುಳ್ಳು . ಅಪಘಾತದಲ್ಲಿ ಕಾರ ಚಾಲಕನ ಯಾವುದೇ ತಪ್ಪಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಅರ್ಜಿದಾರರಿಗೆ ಸಹಾಯ ಮಾಡಲು ಕಾರ ಚಾಲಕನ ವಿರುದ್ಧ ಸುಳ್ಳು ಫಿರ್ಯಾದು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 3 ನೇ ಎದುರುದಾರರ ಪರವಾಗಿ: ಶ್ರೀ ವಾಯ್ ವಿ ಎಸ್ ವಕೀಲರಿಂದ:**

ಏನೂ ಇಲ್ಲ .

4 ನೇ ಎದುರುದಾರ ಪರ ವಕೀಲರನ್ನು ಕೂಗಿಸಿ ಕರೆಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.